

بِسْمِ اللّٰهِ الرَّحْمٰنِ الرَّحِيم

# ಖಿಲಾಫತ್ – ಅಲ್ಲಾಹನ ಅನುಗ್ರಹ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 25–05–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

وَعَدَ اللَّهُ الَّذِينَ آمَنُوا مِنكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي الْأَرْضِ كَمَا اسْتَخْلَفَ الَّذِينَ مِن قَبْلِهِمْ وَلَيُمَكِّنَنَّ لَهُمْ دِينَهُمُ الَّذِي ارْتَضَىٰ لَهُمْ وَلَيُبَدِّلَنَّهُم مِّن بَعْدِ خَوْفِهِمْ أَمْنًا ۚ يَعْبُدُونَنِي لَا يُشْرِكُونَ بِي شَيْئًا ۚ وَمَن كَفَرَ بَعْدَ ذَٰلِكَ فَأُولَٰئِكَ هُمُ الْفَاسِقُونَ
وَأَقِيمُوا الصَّلَاةَ وَآتُوا الزَّكَاةَ وَأَطِيعُوا الرَّسُولَ لَعَلَّكُمْ تُرْحَمُونَ

**ವಅದಲ್ಲಾಹುಲ್ಲದೀನ ಆಮನೂ ಮಿನ್‌ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್ತಖ್‌ಲಿಫನ್ನಹುಮ್ ಫಿಲ್ ಅರ್‌ಝಿ ಕಮಸ್ತಖ್‌ಲಫಲ್ಲದೀನ ಮಿನ್‌ಖಬ್‌ಲಿಹಿಮ್ ವ ಲಯುಮಕ್ಕಿನನ್ನ ಲಹುಮ್ ದೀನ ಹುಮುಲ್ಲದಿರ್‌ತಝಾ ಲಹುಮ್ ವಲಯುಬದ್ದಿಲನ್ನಹುಮ್ ಮಿನ್ ಬಅ್‌ದಿ ಖೌಫಿಹಿಮ್ ಅಮ್ನ. ಯಅ್‌ಬುದೂನನೀ ಲಾ ಯುಶ್‌ರಿಕೂನ ಬೀ ಶೈಅನ್ ವಮನ್ ಕಫರ ಬಅ್‌ದ ದ್ಹಾಲಿಕ ಫಉಲಾಯಿಕ ಹುಮುಲ್ ಫಾಸಿಖೂನ್. ವ ಅಖೀಮುಸ್ಸಲಾತ ವ ಆತುಝ್ಝಕಾತ ವ ಅತೀಉರ್‌ರಸೂಲ ಲಅಲ್ಲಕುಮ್ ತುರ್‌ಹಮೂನ್.**

ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ, ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ, ಅವರ ಭಯ ಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕೋಸ್ಕರ ನೀವು ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ, ಝಕಾತ್ ನೀಡಿರಿ ಮತ್ತು ಪ್ರವಾದಿಗೆ ವಿಧೇಯರಾಗಿದ್ದುಕೊಳ್ಳಿರಿ. (24:56,57)

ಈ ವಚನಗಳಲ್ಲಿ ಅಲ್ಲಾಹನು ಒಂದು ವಾಗ್ದಾನದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಅಲ್ಲಾಹನು ನಿಮಗೆ ಒಂದು ಪಾರಿತೋಷಿಕ ದಯಪಾಲಿಸುವನು. ಆ ಪಾರಿತೋಷಿಕ ಖಿಲಾಫತ್ ಆಗಿದೆ. ಅದರ ಮೂಲಕ ನಿಮಗೆ ಸುರಕ್ಷೆ ಲಭಿಸುವುದು. ಭಯದ ಸ್ಥಿತಿಯ ನಂತರ ನೆಮ್ಮದಿ ದೊರಕುವುದು. ಇದೊಂದು ವಾಗ್ದಾನವಾಗಿದೆ ಭವಿಷ್ಯವಾಣಿಯಲ್ಲ. ಈ ವಾಗ್ದಾನದ ಶರತ್ತುಗಳನ್ನು ಪಾಲಿಸುವವರಿಗೆ ಖಂಡಿತವಾಗಿಯೂ ಈ ವಾಗ್ದಾನ ಈಡೇರಿಸಿಕೊಡುವೆನೆಂದು ಅಲ್ಲಾಹನು ಹೇಳಿದ್ದಾನೆ. ಆ ಶರತ್ತುಗಳನ್ನು ಅಲ್ಲಾಹನು ವಿವರಿಸಿದ್ದಾನೆ. ಅವರು ನನ್ನನ್ನು ಆರಾಧನೆ ಮಾಡುವವರಾಗುವರು. ಶಿರ್ಕ್‌ನಿಂದ ಸಂಪೂರ್ಣವಾಗಿ ತಮ್ಮನ್ನು ರಕ್ಷಿಸಿಕೊಳ್ಳುವವರಾಗುವರು. ಆರಾಧನೆ ಮಾಡುವವರಾಗದಿದ್ದರೆ ಶಿರ್ಕ್‌ನಿಂದ ಸಂಪೂರ್ಣವಾಗಿ ರಕ್ಷಿಸಿಕೊಳ್ಳುವವರಾಗದಿದ್ದರೆ ಈ ವಾಗ್ದಾನದಿಂದ ಲಾಭಪಡೆಯಲಾರರು. ಪವಿತ್ರ ಖುರ್‌ಆನ್‌ನಿಂದಲೂ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಆಖರಿ ಝಮಾನದಲ್ಲಿಯೂ ಖಿಲಾಫತ್ ಅಲಾಮಿನ್‌ಹಾಜಿ ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿರುವ ಖಿಲಾಫತ್) ಸ್ಥಾಪಿತವಾಗುವುದು ಎಂದು. ಹದೀಸುಗಳಿಂದಲೂ ತಿಳಿಯುತ್ತವೆ ಖಿಲಾಫತ್ ಅಲಾಮಿನ್‌ಹಾಜಿ ನುಬುವ್ವತ್ ಸ್ಥಾಪಿತವಾಗುವುದು ಎಂದು. ಇದು ಶಾಶ್ವತ ಖಿಲಾಫತ್ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ನನ್ನ ಅನಂತರ ಖಿಲಾಫತ್ ಸ್ಥಾಪಿತವಾಗುವುದು ಮತ್ತು ಅದು ಶಾಶ್ವತವಾಗಿರುವುದು ಎಂದು.

ಅಲ್ಲಾಹನು ಮೇಲೆ ಉಲ್ಲೇಖಿಸಿದ ವಚನಗಳಲ್ಲಿ ಮುಸ್ಲಿಮರೊಂದಿಗೆ ಸ್ಪಷ್ಟವಾಗಿ ಹೇಳಿದ್ದಾನೆ. ಖಿಲಾಫತ್ ಬಗ್ಗೆ ವಾಗ್ದಾನದಿಂದ ಅನುಗ್ರಹ ಪಡೆಯಲು, ಅದರ ಬಹುಮಾನಗಳಿಂದ ಭಾಗವನ್ನು ಪಡೆಯಲು ನಿಮ್ಮ ಸ್ಥಿತಿಯನ್ನು ಬದಲಾಯಿಸಬೇಕಾದುದು ಆವಶ್ಯಕವಾಗಿದೆ. ಕೇವಲ ಮುಸ್ಲಿಮ್ ಎಂದು ಕರೆಯಲ್ಪಡುವುದರಿಂದ, ಬಾಹ್ಯವಾಗಿ ವಿಶ್ವಾಸದ ಪ್ರಕಟಣೆಯಿಂದ ನೀವು ಖಿಲಾಫತ್ ಎಂಬ ಪಾರಿತೋಷಿಕದ ಹಕ್ಕುದಾರರಾಗಲಾರಿರಿ. ಅಲ್ಲಾಹನು ಮುಸ್ಲಿಮರಿಗೆ ಉಪದೇಶಿಸಿದ್ದಾನೆ– ಆರಾಧನೆಯ ಕರ್ತವ್ಯ ನೆರವೇರಿಸಲು ಮತ್ತು ಶಿರ್ಕ್‌ನಿಂದ ರಕ್ಷಿಸಿಕೊಳ್ಳಲು ನಮಾಝ್‌ಗಳನ್ನು ಸ್ಥಾಪಿಸಿರಿ, ಝಕಾತ್ ನೀಡಿರಿ ಮತ್ತು ಸಂದೇಶವಾಹಕರಿಗೆ ವಿಧೇಯರಾಗಿರಿ ಎಂದು. ಹಾಗೆ ಮಾಡಿದರೆ ಮಾತ್ರ ನೀವು ಅಲ್ಲಾಹನ ಕಾರುಣ್ಯವನ್ನು ಗಳಿಸ ಬಲ್ಲಿರಿ. ವಿಧೇಯತೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮೊಂದಿಗೆ ಹೇಳಿದ ಮಾತನ್ನು ನೆನಪಿನಲ್ಲಿರಿಸಬೇಕು. ಅವರು ಹೇಳಿರುವರು: ಯಾರು ನಾನು ನೇಮಿಸಿದ ಅಮೀರರನ್ನು ಅನುಸರಿಸುತ್ತಾರೋ ಅವರು ನನ್ನನ್ನು ಅನುಸರಿಸುವವರಾಗುತ್ತಾರೆ. ಯಾರು ನಾನು ನೇಮಿಸಿದ ಅಮೀರರ ಆಜ್ಞೆಯನ್ನು ತಿರಸ್ಕರಿಸುತ್ತಾರೋ ಅವರು ನನ್ನನ್ನು ತಿರಸ್ಕರಿಸುತ್ತಾರೆ. ಖಿಲಾಫತ್ ವ್ಯವಸ್ಥೆಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೇಮಿಸಿದ ಅಮೀರ್ ಖಲೀಫರೇ ಆಗಿದ್ದಾರೆ. ಮಿನ್‌ಹಾಜಿ ನುಬುವ್ವತ್ (ನುಬುವ್ವತ್ ಮಾರ್ಗದಲ್ಲಿ) ಸ್ಥಾಪಿತವಾದ ಖಿಲಾಫತನ್ನು ಇಲ್ಲಿ ಉದ್ದೇಶಿಸಲಾಗಿದೆ. ಇಂತಹ ಖಿಲಾಫತ್ ಈಗ ಅಹ್ಮದಿಯಾ ಜಮಾಅತ್‌ನಲ್ಲಿ ಮಾತ್ರ ಜಾರಿಯಲ್ಲಿದೆ.

ಕೆಲವು ವಿದ್ವಾಂಸರು ಮತ್ತು ಸಭ್ಯರಾಗಿರುವವರು ಖಿಲಾಫತ್ ವ್ಯವಸ್ಥೆ ಬೇಕೆಂದು ಹೇಳುತ್ತಾರೆ. ಆದರೆ ಅಲ್ಲಾಹನು ಸ್ಥಾಪಿಸಿರುವ ಖಿಲಾಫತ್ ವ್ಯವಸ್ಥೆಯನ್ನು ಅಂಗೀಕರಿಸಿರಿ ಎಂದು ಅವರೊಂದಿಗೆ ಹೇಳಿದರೆ ಅವರು

ಅದನ್ನು ಒಪ್ಪಿಕೊಳ್ಳಲು ಸಿದ್ಧರಾಗುವುದಿಲ್ಲ. ಅವರು ವಿರೋಧಿಸುವುದರಲ್ಲಿ ಮುಂದಾಗಿದ್ದಾರೆ. ಈ ವಿರೋಧದ ಇತ್ತೀಚೆಗಿನ ಘಟನೆ ಎರಡು ದಿನಗಳ ಹಿಂದೆ ಸಿಯಾಲ್‌ಕೋಟಿನಲ್ಲಿ ನಮ್ಮ ಮಸ್‌ಜಿದ್‌ನಲ್ಲಿ ಸಂಭವಿಸಿತು. ಮಸ್‌ಜಿದ್ ಮತ್ತು ಅದರ ಬಳಿ ಇದ್ದ ಮನೆಯನ್ನು ಪೋಲೀಸ್ ಮತ್ತು ಆಡಳಿತೆ ವ್ಯವಸ್ಥೆಯ ನೇತೃತ್ವದಲ್ಲಿ ಮೌಲವಿಗಳು ಮತ್ತು ಅವರ ಕೆಲವು ನೂರು ಚೇಲಾಗಳು ಆಕ್ರಮಿಸಿ ಧ್ವಂಸ ಮಾಡಿದರು. ಅವರು ಘೋಷಿಸುತ್ತಿದ್ದಾರೆ ಬೇರೆ ಮಸ್‌ಜಿದ್‌ಗಳಿಗೂ ಹಾನಿಯನ್ನುಂಟು ಮಾಡುವೆವು, ಕೆಡವಿ ಹಾಕುವೆವು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಸ್ಥಾಪಿತವಾದ ಈ ಖಿಲಾಫತನ್ನು ನಂಬುವ ತನಕ ಇಂತಹ ಕೃತ್ಯಗಳನ್ನು ಅವರು ಮಾಡುತ್ತಲೇ ಇರುವರು. ಅವರಿಂದ ಯಾವುದಾದರೂ ಒಳಿತಿನ ಬಗ್ಗೆ ಎಂದೂ ಪ್ರತೀಕ್ಷಿಸಲು ಸಾಧ್ಯವೇ ಇಲ್ಲವಾಗಿದೆ. ನಮ್ಮ ಭಾವನೆಗಳ ಬಗ್ಗೆ ಹೇಳುವುದಾದರೆ, ಈ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಸ್ಮಾರಕಕ್ಕೆ ಹಾನಿಯುಂಟುಮಾಡಿರುವರು ಮತ್ತು ಸರಕಾರ ಅದನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಯಾವಾಗಲೂ ನಾವು ನೀಡುವ ಹೇಳಿಕೆಯ ಹಾಗೆಯೇ ಈಗ ಸಹ ಹೇಳಿಕೆ ನೀಡುತ್ತೇವೆ.

**ಇನ್ನಮಾ ಅಶ್‌ಕೂ ಬಸ್ಸೀ ವಹುಝ್ನೀ ಇಲಲ್ಲಾಹ್** – ನನ್ನ ಮನೋವ್ಯಥೆಯನ್ನೂ ವ್ಯಾಕುಲವನ್ನೂ ಅಲ್ಲಾಹನೊಡನೆ ನಾನು ನಿವೇದಿಸುತ್ತೇನೆ. (12:27).

ನಿಶ್ಚಯವಾಗಿಯೂ ಆ ಕಟ್ಟಡಗಳ ಬಗ್ಗೆ ನಮಗೆ ಭಾವನಾತ್ಮಕ ಸಂಬಂಧವಿದೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅತ್ಯಂತ ಉನ್ನತ ಮಟ್ಟದ ಸಂಬಂಧ ಹೊಂದಿರುವುದರ ಪ್ರಕಟಣೆ ಕೇವಲ ಕಟ್ಟಡಗಳ ಸಂರಕ್ಷಣೆಯಿಂದ ಆಗಲಾರದು. ಅದನ್ನು ಪ್ರಕಟಿಸಬೇಕಾದುದು ಅವರ ಉಪದೇಶಗಳನ್ನು ಅನುಷ್ಠಾನಕ್ಕೆ ತರುವ ಮೂಲಕವಾಗಿದೆ. ಅವರ ನಂತರ ಖಿಲಾಫತ್ ವ್ಯವಸ್ಥೆಯೊಂದಿಗೆ ಜೋಡಿಸಿಕೊಳ್ಳುವ ಮೂಲಕ ಅದನ್ನು ಪ್ರಕಟಿಸಬೇಕು. ಖಿಲಾಫತ್‌ನಿಂದ ದೊರಕುವ ಅನುಗ್ರಹದ ಪಾಲು ಪಡೆಯಲು ಅಲ್ಲಾಹನು ಹೇಳಿದ ಕಾರ್ಯಗಳನ್ನು ಮಾಡುವವರಾಗಬೇಕು. ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಬೇಕು. ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬೇಕು. ನಮ್ಮ ಅನುಸರಣೆಯ ಮಟ್ಟವನ್ನೂ ವರ್ಧಿಸಬೇಕು. ಇವೆಲ್ಲವುಗಳಿಗೋಸ್ಕರ ನಾವು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಬ್ಬರು ಕೇಳಿದರು ಖಲೀಫರು ಆಗಮಿಸುವ ಉದ್ದೇಶವೇನು? ಎಂದು. ಆಗ ಅವರು ನೀಡಿದ ಉತ್ತರವನ್ನು ನಾವು ಯಾವಾಗಲೂ ನೆನೆಪಿನಲ್ಲಿಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅದರ ಉದ್ದೇಶ **ಇಸ್‌ಲಾಹ್** ಸುಧಾರಣೆ ಮಾಡುವುದು ಆಗಿದೆ. ಪ್ರವಾದಿಯ ಉಪದೇಶವನ್ನು ಜನರು ದೀರ್ಘಕಾಲದ ನಂತರ ಮರೆತುಬಿಡುವಾಗ, ನೇರವಾದ ಮಾರ್ಗವನ್ನೂ ಸತ್ಯ ವಿಶ್ವಾಸವನ್ನೂ ಕಳೆದುಕೊಳ್ಳುವಾಗ, ಅಂಧಕಾರದಲ್ಲಿಯೂ ಪಥಭ್ರಷ್ಟತೆಯಲ್ಲಿಯೂ ಪಾಪಕೃತ್ಯಗಳಲ್ಲಿಯೂ ಮುಳುಗಿ ನಾಲ್ಕು ದಿಕ್ಕುಗಳಿಂದ ಅಂಧಕಾರ ಕವಿಯುವಾಗ ಅಲ್ಲಾಹನ ಗುಣವಿಶೇಷಗಳು ಕಾರ್ಯೋನ್ಮುಖವಾಗುತ್ತವೆ. ಒಬ್ಬ ವೈಭವಶಾಲಿ ಮನುಷ್ಯನ ಮೂಲಕ ಲೋಕದಲ್ಲಿ ಅಲ್ಲಾಹನ ಬಗ್ಗೆ ಜ್ಞಾನವನ್ನು ಸ್ಥಾಪಿಸಲು ಸ್ಪಷ್ಟವಾದ ದೃಷ್ಟಾಂತಗಳ ಮೂಲಕ ದೇವಾಸ್ತಿತ್ವದ ಸ್ಪಷ್ಟವಾದ ಸಾಕ್ಷ್ಯಾಧಾರ ನೀಡಲ್ಪಡುತ್ತವೆ. ಮುಸ್ಲಿಮರಲ್ಲಿಯೂ ಸತ್ಯವಿಶ್ವಾಸ ಕಳೆದು ಹೋಗಿದೆ. ತಖ್ವ ನಷ್ಟವಾಗಿದೆ. ಮುಸ್ಲಿಮೇತರರಲ್ಲೂ ಇದೇ ಸ್ಥಿತಿ ಇದೆ. ಆದುದರಿಂದ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಖಾತಮುಲ್ ಖುಲಫಾರನ್ನು ಕಳುಹಿಸಿದನು. ಇದು ಅಲ್ಲಾಹನ ಸುನ್ನತ್ ಪ್ರಕಾರ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಈ ಪುರಾತನ ಸುನ್ನತ್ (ನಡೆವಳಿಕೆ) ಪ್ರಕಾರ ನಮ್ಮ ಜಮಾಅತ್ ಸ್ಥಾಪಿತವಾಗಿದೆ. ಅಲ್ಲಾಹನ ಅಸ್ತಿತ್ವದ ಬಗ್ಗೆ ಸ್ಪಷ್ಟವಾದ ಸಾಕ್ಷ್ಯಗಳನ್ನು ನೀಡಿ ಏಕದೇವ ವಿಶ್ವಾಸವನ್ನು ಪುನಃ ಸ್ಥಾಪಿಸುವುದು ಮತ್ತು ಸದ್ಗುಣಗಳನ್ನು ಪುನಃ ಸ್ಥಾಪಿಸುವುದು ಅದರ ಉದ್ದೇಶವಾಗಿದೆ. ಮುಸ್ಲಿಮರಲ್ಲಿ ಬಹುತೇಕ ಜನರ ಕರ್ಮಾನುಷ್ಠಾನಗಳ ಸ್ಥಿತಿ ಬಲಹೀನವಾಗಿದೆ ಎಂದು ನಾವು ಕಾಣುತ್ತಿದ್ದೇವೆ. ಗೋರಿಪೂಜೆ, ಶಿರ್ಕ್ ಮತ್ತು ನವೀನಾಚಾರಗಳಲ್ಲಿ ಅವರು ಮುಳುಗಿದ್ದಾರೆ. ಪಾಪಕೃತ್ಯಗಳು ಸಾಮಾನ್ಯವಾಗಿವೆ.

ಅಲ್ಲಾಹನ ಪುರಾತನ ಸುನ್ನತ್ (ನಡೆವಳಿಕೆ) ಪ್ರಕಾರ ಈ ಜಮಾಅತ್ ಸ್ಥಾಪಿತವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಮಾತು ಯಾವಾಗಲೂ ನಮ್ಮನ್ನು ಜಾಗರೂಕರನ್ನಾಗಿ ಮಾಡಬೇಕಾಗಿದೆ. ಲೋಕದಲ್ಲಿ ಪ್ರತಿಯೊಂದು ಕಡೆಗಳಲ್ಲೂ ವ್ಯಾಪಕವಾಗಿ ಪಾಪಕೃತ್ಯಗಳು ವರ್ಧಿಸುವಾಗ, ನೈತಿಕಗುಣಗಳು ಕೊನೆಗೊಳ್ಳುವಾಗ ಅಲ್ಲಾಹನು ತನಗೆ ಪ್ರಿಯನಾದ ಒಬ್ಬರನ್ನು ಕಳುಹಿಸುತ್ತಾನೆ. ಆಗ ಧಾರ್ಮಿಕ ಪುನಶ್ಚೇತನ ಉಂಟಾಗುತ್ತದೆ. ಆದುದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ಸಹ ನಮ್ಮಲ್ಲಿ ಉತ್ತಮವಾದ ಬದಲಾವಣೆಯನ್ನು ಉಂಟುಮಾಡುವುದಿಲ್ಲವಾದರೆ ಅದು ಬಹಳ ಚಿಂತಾರ್ಹವಾದ ವಿಷಯವಾಗಿದೆ. ನಾವು ಪ್ರತಿ ಸಮಯದಲ್ಲಿಯೂ ನಮ್ಮನ್ನು ಪರಿಶೋಧಿಸಿಕೊಳ್ಳುತ್ತಾ ಇರಬೇಕು. ಖಿಲಾಫತ್‌ಗೆ ಸಂಬಂಧಿಸಿದ ಅನುಗ್ರಹಗಳನ್ನು ಗಳಿಸಲು ನಾವು ಯಾವುದೆಲ್ಲಾ ಕೆಲಸಗಳನ್ನು ಮಾಡಬೇಕೆಂದು ಉಪದೇಶ ನೀಡಲಾಗಿದೆಯೋ ಅದಕ್ಕನುಸಾರವಾಗಿ ನಾವು ನಮ್ಮ ಜೀವಿತವನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆಯೋ ಇಲ್ಲವೋ ಎಂದು. ನಮ್ಮ ಆರಾಧನೆಗಳು ಹೇಗಿವೆ ನಮ್ಮ ನಮಾಝ್‌ಗಳ ಸ್ಥಿತಿ ಹೇಗಿವೆ ಎಂದು ಪರಿಶೋಧಿಸಬೇಕು. ನಮ್ಮ ಮಾತು ಮತ್ತು ಕರ್ಮಗಳು ಶಿರ್ಕ್‌ನಿಂದ ಮುಕ್ತವಾಗಿವೆಯೋ ಇಲ್ಲವೋ ಎಂದು ನೋಡಬೇಕು. ನಮ್ಮ ಆರ್ಥಿಕ ತ್ಯಾಗದ ಮಟ್ಟ ಹೇಗಿದೆ ನಮ್ಮ ಅನುಸರಣೆಯ ಮಟ್ಟ ಹೇಗಿದೆ ಎಂದೆಲ್ಲಾ ನೋಡಬೇಕು. ಅಲ್ಲಾಹನ ಮತ್ತು ಅವನ ಸಂದೇಶವಾಹಕರು ಹೇಳಿದ ಹಾಗೆ ನಾವು ಆ ಮಟ್ಟವನ್ನು ಗಳಿಸುವವರಾಗಿದ್ದೇವೋ ಇಲ್ಲವೋ ಎಂದು ನೋಡಬೇಕು.

ಹಾಗೆಯೇ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮ ಜಮಾಅತಿನವರು ಯಾವ ಮಟ್ಟಕ್ಕೆ ತಲಪಬೇಕೆಂದು ಆಶಿಸಿದ್ದರೋ ಆ ಮಟ್ಟವನ್ನು ತಲಪಲು ನಾವು ಪ್ರಯತ್ನ ಮಾಡುತ್ತಿದ್ದೇವೆಯೋ ಇಲ್ಲವೋ ಎಂದು ನೋಡಬೇಕು. ಇಬಾದತ್ ಮತ್ತು ನಮಾಝ್‌ಗಳ ಮಹತ್ವದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದರು: ಖಿಯಾಮತ್ ದಿನ ದಾಸರ ಲೆಕ್ಕಾಚಾರ ನಡೆಸುವಾಗ ಮೊದಲು ಪರಿಶೋಧಿಸುವುದು ನಮಾಝ್ ಬಗ್ಗೆಯಾಗಿದೆ. ಅದಕ್ಕೆ ಸಂಬಂಧಿಸಿ ಲೆಕ್ಕ ಸರಿಯಾಗಿದ್ದರೆ ಅವನು ಜಯಶಾಲಿಯಾದನು. ಅವನು ಮೋಕ್ಷ ಗಳಿಸಿದನು. ಅದರ ಲೆಕ್ಕ ಕೆಟ್ಟದಾಗಿದ್ದರೆ ಅವನು ಸೋತು ಹೋಗುವನು. ಅವನು ನಷ್ಟಕ್ಕೆ ಪಾತ್ರನಾಗುವನು.

ಹಝ್ರತ್ ಜಾಬಿರ್[ರ] ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಮಾಝನ್ನು ಬಿಡುವುದು ಮನುಷ್ಯನನ್ನು ಶಿರ್ಕ್ ಮತ್ತು ಕುಫ್ರ್‌ಗೆ ಸಮೀಪ ಗೊಳಿಸುತ್ತದೆ. ಆದುದರಿಂದ ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಶಿರ್ಕ್ ಎಂತಹ ಅಪರಾಧವೆಂದರೆ ಅದು ಅಲ್ಲಾಹನಿಗೆ ಅತ್ಯಂತ ಅನಿಷ್ಟಕರವಾದುದು ಆಗಿದೆ. ಶಿರ್ಕನ್ನು ಅಲ್ಲಾಹನು ಕ್ಷಮಿಸುವುದಿಲ್ಲ. ನಾವು ಇಂತಹ ಅಪರಾಧವನ್ನು ಮಾಡಿ ಅಲ್ಲಾಹನಿಂದ ಖಿಲಾಫತ್‌ನ ಅನುಗ್ರಹಗಳನ್ನು ಗಳಿಸಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿಲ್ಲ. ನಮಾಝ್ ಹೇಗಿರಬೇಕು ಅದರ ವಾಸ್ತವಿಕತೆ ಮತ್ತು ಆತ್ಮದ ಮಟ್ಟ ಹೇಗಿರಬೇಕು ಇವುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಲವು ಜನರು ಮಸ್‌ಜಿದ್‌ಗೆ ಹೋಗುತ್ತಾರೆ. ನಮಾಝ್ ನಿರ್ವಹಿಸುತ್ತಾರೆ. ಇಸ್ಲಾಮಿನ ಇತರ ಅನುಷ್ಠಾನ ಕರ್ಮಗಳನ್ನೂ ಮಾಡುತ್ತಾರೆ. ಆದರೆ ಅವರಿಗೆ ಅಲ್ಲಾಹನ ಸಹಾಯ ಲಭಿಸುವುದಿಲ್ಲ. ಅವರ ನೈತಿಕ ಗುಣಗಳಲ್ಲಿ ಮತ್ತು ನಿತ್ಯ ಚರ್ಯೆಗಳಲ್ಲಿ ಯಾವುದಾದರೂ ಎದ್ದು ಕಾಣುವ ಬದಲಾವಣೆ ಗೋಚರಿಸುವುದಿಲ್ಲ. ಏಕೆಂದರೆ ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವುದು ಒಂದು ಬೀಜದ ಹಾಗೆ ಇರುತ್ತದೆ. ಅದರ ಪ್ರಭಾವ ಆತ್ಮ ಮತ್ತು ಶರೀರದ ಮೇಲುಂಟಾಗುತ್ತದೆ. ಒಬ್ಬನು ಗದ್ದೆಗೆ ನೀರು ಹಾಯಿಸುತ್ತಾನೆ ಮತ್ತು ಬಹಳ ಕಷ್ಟಪಟ್ಟು ಬೀಜ ಬಿತ್ತುತ್ತಾನೆ ಒಂದೆರಡು ತಿಂಗಳೊಳಗೆ ಫಸಲಿನ ಚಿಹ್ನೆಗಳು ಕಾಣಿಸದಿದ್ದರೆ ಬೀಜ ಹಾಳಾಗಿದೆ ಎಂದು ತಿಳಿಯಬೇಕಾಗಿದೆ.

ಆದುದರಿಂದ ನಾವು ಈ ಅಂಶವನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನಮ್ಮ ಆರಾಧನೆ, ನಮ್ಮ ಸ್ವಭಾವಗುಣ ನಮ್ಮ ರೀತಿ ನೀತಿಗಳನ್ನು ಉತ್ತಮ ಪಡಿಸಿ ಅಲ್ಲಾಹನ ಸಾಮೀಪ್ಯ ಗಳಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಾಝ್ ಬಗ್ಗೆ ವಿವರಿಸುತ್ತಾ ಹೇಳಿದರು: ನಮಾಝ್ ಎಂದರೇನು? ತಸ್‌ಬೀಹ್, ತಹ್‌ಮೀದ್, ತಖ್‌ದೀಸ್, ಇಸ್ತಿಗ್‌ಫಾರ್ ಮತ್ತು ದುರೂದ್‌ನೊಂದಿಗೆ ಅಳಲಿನೊಂದಿಗೆ ಮಾಡುವ ಪ್ರಾರ್ಥನೆಯೇ ನಮಾಝ್ ಆಗಿದೆ. ನೀವು ನಮಾಝ್ ಮಾಡುವಾಗ ಪವಿತ್ರ ಖುರ್‌ಆನ್ ವಚನಗಳನ್ನೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಗಳಲ್ಲಿರುವ ದುಆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ದುಆಗಳನ್ನು ನಿಮ್ಮ ಸ್ವಂತ ಭಾಷೆಯಲ್ಲಿ ಅಳಲಿನೊಂದಿಗೆ ಬೇಡಿಕೊಳ್ಳಿರಿ. ಅದರ ಪ್ರಭಾವ ನಿಮ್ಮ ಹೃದಯದ ಮೇಲೆಯೂ ಉಂಟಾಗಲಿ. ನಮಾಝ್ ಎಂತಹ ಪ್ರಭಾವ ಹೊಂದಿದೆ ಎಂದರೆ ಅದರಿಂದ ಆಕಾಶ ಮನುಷ್ಯನಿಗೆ ಬಾಗುತ್ತವೆ. ನಮಾಝ್ ಮಾಡುವವನು ತಾನು ಮೃತನಾದೆನು ಎಂದು ಭಾವಿಸುವಾಗ ಅವನ ಆತ್ಮ ಅಲ್ಲಾಹನ ಸನ್ನಿಧಾನಕ್ಕೆ ಹಾರಿಹೋಗಿ ಬೀಳುತ್ತದೆ. ಯಾವ ಮನೆಯಲ್ಲಿ ಇಂತಹ ನಮಾಝ್ ಅನುಷ್ಠಿಸಲ್ಪಡುವುದೋ ಆ ಮನೆ ನಾಶವಾಗದು.

ಅಲ್ಲಾಹನು ಹೇಳಿದ್ದಾನೆ: ಶಿರ್ಕ್ ಮಾಡುವುದರಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಇದಕ್ಕೆ ಸಂಬಂಧಿಸಿ ಒಂದು ಹದೀಸಿನಲ್ಲಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತನ್ನ ಸಮುದಾಯದಲ್ಲಿ ತಲೆದೋರಬಹುದಾದ ಶಿರ್ಕ್ ಬಗ್ಗೆ ಆತಂಕವಿತ್ತು ಎಂದು ವರದಿಯಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ಯಗ್‌ಫಿರು ಮಾ ದೂನದ್ಹಾಲಿಕ** – ಶಿರ್ಕ್ ಹೊರತು ಉಳಿದ ಎಲ್ಲಾ ಪಾಪದೋಷಗಳನ್ನು ಕ್ಷಮಿಸಲಾಗುವುದು ಎಂದು. ಆದರೆ ಶಿರ್ಕನ್ನು ಅಲ್ಲಾಹನು ಕ್ಷಮಿಸಲಾರನು. ಆದುದರಿಂದ ಶಿರ್ಕ್‌ನ ಸಮೀಪಕ್ಕೆ ಹೋಗಬೇಡಿರಿ. ಅದನ್ನು ನಿಷಿದ್ಧ ಮರವಾಗಿ ಗಣಿಸಿರಿ. ತೌಹೀದ್ ಎಂದರೆ ಬಾಯಿಯಲ್ಲಿ **ಲಾಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಾ ಹೃದಯದಲ್ಲಿ ಸಾವಿರಾರು ವಿಗ್ರಹಗಳನ್ನು ಜಮಾಯಿಸಿಡುವುದರ ಹೆಸರಲ್ಲ. ಒಬ್ಬನು ತನ್ನ ಕೆಲಸಕ್ಕೆ, ವಂಚನೆಗೆ, ಯೋಜನೆಗೆ ಅಲ್ಲಾಹನ ಹಾಗಿರುವ ಮಹತ್ವವನ್ನು ನೀಡುವುದಾದರೆ, ಅಥವಾ ಅಲ್ಲಾಹನ ಮೇಲೆ ಭರವಸೆ ಇಡಬೇಕಾದ ರೀತಿಯಲ್ಲಿ ಮನುಷ್ಯನ ಬಗ್ಗೆ ಭರವಸೆ ಇಡುವುದಾದರೆ, ಅಥವಾ ಸ್ವತಃ ತನ್ನ ಕುರಿತು ದೇವನಿಗೆ ನೀಡಬೇಕಾದ ಮಹತ್ವ ನೀಡುವುದಾದರೆ ಅವನು ಅಲ್ಲಾಹನ ದೃಷ್ಟಿಯಲ್ಲಿ ವಿಗ್ರಹಾರಾಧಕನಾಗುತ್ತಾನೆ.

ಖಿಲಾಫತ್‌ನ ಅನುಗ್ರಹಗಳನ್ನು ಪಡೆಯಲಿಕ್ಕಾಗಿ ಝಕಾತ್ ಮತ್ತು ಆರ್ಥಿಕ ತ್ಯಾಗ ಮಾಡುವುದು ಆವಶ್ಯಕವೆಂದು ಹೇಳಲಾಗಿದೆ. ಹದೀಸಿನಲ್ಲಿ ಹಝ್ರತ್ ಇಬ್ನು ಮಸ್‌ಊದ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಎರಡು ವ್ಯಕ್ತಿಗಳ ಬಗ್ಗೆ ಹೊರತು ಬೇರೆ ಯಾರ ಬಗ್ಗೆಯೂ ಅಸೂಯೆ ಪಡಬಾರದು. ಒಬ್ಬನಿಗೆ ಅಲ್ಲಾಹನು ಸಂಪತ್ತು ನೀಡಿದಾಗ ಅವನು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಅವನ ಬಗ್ಗೆ ಮತ್ತು ಒಬ್ಬನಿಗೆ ಜ್ಞಾನ, ಬುದ್ಧಿ ದೊರೆತಾಗ ಅವನು ಅದರ ಸಹಾಯದಿಂದ ಜನರ ಮಧ್ಯೆ ತೀರ್ಪು ನೀಡುತ್ತಾನೆ ಮತ್ತು ಜನರಿಗೆ ವಿದ್ಯೆ ಕಲಿಸುತ್ತಾನೆ ಅವನ ಬಗ್ಗೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಾಝ್‌ಗಳನ್ನು ಅನುಷ್ಠಿಸುವುದು ಮತ್ತು ಝಕಾತ್ ಕೊಡುವುದು ಇವುಗಳ ಮಧ್ಯೆ ಇರುವ ಸಂಬಂಧದ ಬಗ್ಗೆ ಹೀಗೆ ಹೇಳುತ್ತಾರೆ: ಜನರು ಹೃದಯಾರ್ದ್ರತೆಯಿಂದ ನಮಾಝ್ ಅನುಷ್ಠಿಸುವುದಾದರೆ ಅವರು ಅನಿವಾರ್ಯವಾಗಿ

ಅನಾವಶ್ಯಕ ಸಂಗತಿಗಳಿಂದ ಮುಖ ತಿರುಗಿಸುತ್ತಾರೆ ಮತ್ತು ಈ ಕೊಳಕು ಲೋಕದಿಂದ ಮೋಕ್ಷ ಗಳಿಸುತ್ತಾರೆ. ಅವರಿಗೆ ಲೌಕಿಕ ಪ್ರೀತಿ ತಣ್ಣಗಾಗುತ್ತದೆ. ಅಲ್ಲಾಹನ ಬಗ್ಗೆ ಪ್ರೀತಿ ಅವರಲ್ಲಿ ವರ್ಧಿಸುತ್ತದೆ. ಅದರ ಪರಿಣಾಮವಾಗಿ **ಹುಮ್ ಲಿಝ್ಝುಕಾತಿ ಫಾಯಿಲೂನ್** ಅವರು ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುವವರಾಗುತ್ತಾರೆ. ನಮಾಝ್‌ಗಳು ಲಘುವಾದ ವಸ್ತುಗಳಿಂದ ವಿಮುಖರಾಗಲು ಪ್ರೇರೇಪಿಸುತ್ತವೆ. ನಂತರ ಅದು ಅವರನ್ನು ಅಲ್ಲಾಹನ ಆಜ್ಞೆಗಳ ಅನುಷ್ಠಾನಕ್ಕೆ ಒಯ್ಯುತ್ತದೆ. ಆಗ ಅವರು ತಮ್ಮ ಸಂಪತ್ತನ್ನು ಅನಾವಶ್ಯಕವಾಗಿ ಖರ್ಚು ಮಾಡುವುದಕ್ಕೆ ಬದಲಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಗಮನ ಹರಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುವಾಗ ಅನೇಕ ರೀತಿಯ ದುರ್ವ್ಯಯಗಳಿಂದ ಮನುಷ್ಯನನ್ನು ಅದು ರಕ್ಷಿಸುತ್ತದೆ.

ಖಿಲಾಫತೆಂಬ ಅನುಗ್ರಹ ಪಡೆದವರೊಂದಿಗೆ, ಅವರು ಅನುಸರಣೆಯ ಮಟ್ಟವನ್ನು ವರ್ಧಿಸಬೇಕೆಂದು ಸಹ ಅಲ್ಲಾಹನು ಹೇಳಿದ್ದಾನೆ. ಒಂದು ಹದೀಸಿನಲ್ಲಿ ಹಝ್ರತ್ ಉಬಾದ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬೈಅತ್ ಮಾಡುವಾಗ ನಾವು ನಿರ್ಧಾರ ಮಾಡಿದ ಅಂಶ ನಾವು ಆಲಿಸಿದ ಕೂಡಲೆ ಅನುಸರಿಸುವೆವು ಎಂದಾಗಿತ್ತು. ನಮಗೆ ಇಷ್ಟವಾದರೂ ಇಷ್ಟವಾಗದಿದ್ದರೂ ಅನುಸರಿಸುವೆವು. ನಾವು ಎಲ್ಲಿ ಇದ್ದರೂ ಯಾವುದೇ ವಸ್ತುವಿನ ಹಕ್ಕುದಾರನೊಂದಿಗೆ ಜಗಳ ಮಾಡಲಾರೆವು. ನಾವು ಸತ್ಯದ ಮೇಲೆ ನೆಲೆನಿಲ್ಲುವೆವು. ನಾವು ಸತ್ಯವನ್ನೇ ಹೇಳುವೆವು. ಅಲ್ಲಾಹನಿಗೆ ಸಂಬಂಧಿಸಿದ ವಿಷಯಗಳಲ್ಲಿ ನಮ್ಮನ್ನು ನಿಂದಿಸುವವನ ನಿಂದನೆಗೆ ಭಯಪಡಲಾರೆವು ಎಂದಾಗಿತ್ತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಆಡಳಿತೆಗಾರರನ್ನೂ ಅನುಸರಿಸಿರಿ. ಅನುಸರಣೆ ಎಂತಹ ವಸ್ತುವೆಂದರೆ ಸತ್ಯ ಹೃದಯದಿಂದ ಅದನ್ನು ಮಾಡಿದರೆ ಹೃದಯದಲ್ಲಿ ಪ್ರಕಾಶವೂ ಆತ್ಮದಲ್ಲಿ ಅಭಿರುಚಿಯೂ ಪ್ರಕಾಶವೂ ಉಂಟಾಗುತ್ತದೆ. ಅನುಸರಣೆ ಎಷ್ಟು ಆವಶ್ಯಕವಾಗಿದೆಯೋ ಅಷ್ಟು ಬೇರೆ ಪರಿಶ್ರಮಗಳ ಆವಶ್ಯಕತೆ ಇರುವುದಿಲ್ಲ. ಆದರೆ ಶರತ್ತೇನೆಂದರೆ ಸತ್ಯವಾದ ಅನುಸರಣೆ ಮಾಡಬೇಕು. ಇದುವೇ ಕಷ್ಟಕರವಾದುದು. ನೀವು ಮಸೀಹ್ ಮೌಊದರ ಜಮಾಅತ್ ಎಂದು ಹೇಳಿಕೊಂಡು ಸಹಾಬರ ಜಮಾಅತ್‌ನೊಂದಿಗೆ ಸೇರಲು ಆಶಿಸುತ್ತಿರುವಾಗ ನೀವು ನಿಮ್ಮಲ್ಲಿ ಸಹಾಬರ ವರ್ಣವನ್ನು ಹೊಂದಲು ಪ್ರಯತ್ನಿಸಬೇಕಾಗಿದೆ.

ಜಮಾಅತಿನ ಅಭಿವೃದ್ಧಿಯನ್ನು ಯಾವಾಗಲೂ ನೆಲೆನಿಲ್ಲಿಸಲು ಮತ್ತು ಖಿಲಾಫತ್ ವ್ಯವಸ್ಥೆಯನ್ನು ಶಾಶ್ವತಾಗಿ ನೆಲೆನಿಲ್ಲಿಸಲು ಆ ಮಾದರಿಯನ್ನೂ ಸ್ಥಿರವಾಗಿ ನೆಲೆನಿಲ್ಲಿಸಬೇಕಾಗುತ್ತದೆ. ಹಾಗೆ ಮಾಡಿದರೆ ಮಾತ್ರ ಅಭಿವೃದ್ಧಿಯು ಹಿಂದೆ ಲಭಿಸಿದ ಹಾಗೆ ಲಭಿಸುವುದು. ನಾವು ನಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸಬೇಕು. ನಮ್ಮ ನಮಾಝ್‌ಗಳನ್ನು ರಕ್ಷಿಸಬೇಕು. ನಮ್ಮ ಮಾತು ಮತ್ತು ಕೃತ್ಯಗಳು ಪ್ರತಿಯೊಂದು ರೀತಿಯ ಶಿರ್ಕ್‌ನಿಂದ ಪರಿಪೂರ್ಣವಾಗಿ ಮುಕ್ತವಾಗಿರಬೇಕು. ನಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು. ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಅನುಸರಣೆಯ ಮಟ್ಟವನ್ನು ಸದಾ ಸಮಯ ಸಂರಕ್ಷಿಸಬೇಕು. ಹಾಗೆ ಮಾಡಿದರೆ ಮಾತ್ರ ನಾವು ಖಿಲಾಫತಿನ ಅನುಗ್ರಹಗಳನ್ನು ಮತ್ತು ಅದರೊಂದಿಗೆ ಅಲ್ಲಾಹನ ವರದಾನಗಳನ್ನು ಗಳಿಸುವವರಾಗುವೆವು. ಖಿಯಾಮತ್ ತನಕ ನೆಲೆನಿಲ್ಲುವ ಖಿಲಾಫತ್‌ನೊಂದಿಗೆ ಜೋಡಿಸಿಕೊಳ್ಳುವವರಾಗುವೆವು. ನಮ್ಮ ಪೀಳಿಗೆಗಳನ್ನು ಅದರೊಂದಿಗೆ ಜೋಡಿಸುವವರಾಗುವೆವು. ಅಲ್ಲಾಹನು ನಮಗೆ ಖಿಲಾಫತೆಂಬ ಅನುಗ್ರಹ ದಯಪಾಲಿಸಿದನು. ಕಳೆದ ಸುಮಾರು 110 ವರ್ಷಗಳಿಂದ ನಾವು ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ಮಾಡಿದ ವಾಗ್ದಾನಗಳ ಈಡೇರುವಿಕೆಯನ್ನು ಕಾಣುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಪ್ರತಿಯೊಬ್ಬನಿಗೆ ಅಲ್ಲಾಹನು ಭಾಗ್ಯ ದಯಪಾಲಿಸಲಿ. ಅಲ್ಲಾಹನು ನೀಡಿದ ಮಾರ್ಗದರ್ಶನಗಳನ್ನು ತನ್ನ ಮುಂದೆ ಇರಿಸಿ ಖಿಲಾಫತಿನ ಅನುಗ್ರಹಗಳಿಂದ ಯಾವಾಗಲೂ ಪಾಲು ಪಡೆಯುವಂತಾಗಲಿ. ನಾನು ಹಿಂದಿನ ವಾರ ಸಹ ಪ್ರಾರ್ಥಿಸಲು ಹೇಳಿದ್ದೆ, ನಾನು ಪುನಃ ಹೇಳುತ್ತೇನೆ– ಪಾಕಿಸ್ಥಾನ್‌ನಲ್ಲಿರುವವರು ವಿಶಿಷ್ಟವಾಗಿ ತಮ್ಮ ಪ್ರಾರ್ಥನೆಗಳ ಬಗ್ಗೆ ಗಮನ ಹರಿಸಬೇಕು. ತಮ್ಮ ನಮಾಝ್‌ಗಳನ್ನು ನಫ್ಲ್ ನಮಾಝ್‌ಗಳನ್ನು ಝಿಕ್ರ್‌ಗಳನ್ನು ಮೊದಲಿಗಿಂತ ಬಹಳ ಹೆಚ್ಚಾಗಿ ವರ್ಧಿಸಬೇಕು. ಅಲ್ಲಾಹನು ನಮಗೆಲ್ಲರಿಗೂ ಹಾಗೆ ಮಾಡುವ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 25-05-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon